


ಮಹಾಭಾರತದೊಳಗಿಂದ ಒಂದಿಷ್ಟು

■ ಹಾಡುಪಾಡು ರಾಮು
ಕಲೆ: ಎಚ್‌.ಎಸ್‌. ಮೋನಪ್ಪ

# ಕರ್ಣನಿಗೆ 'ನಿಜ ಹೇಳತಿದೀನಿ, ನನ್ನ ಕೈಲಾಗಲಿಲ್ಲ ಕಂದಾ' ಎಂದನಾ ಭೀಷ್ಮ

ಶಂತನುವಿನ ಮಗ ಭೀಷ್ಮ ಕೆಳಗೆ ಬಿದ್ದ. ಸುಮ್ಮಗಾದ.

ಎಲ್ಲರೂ ಅವರವರ ಬಿಡಾರಕ್ಕೆ ಹೋದರು.

ಇದ ಕೇಳಿದ ರಾಧೆಯ ಮಗ ಹೆದರಿದ, ಸುಸ್ತಾದ, ಓಡೋಡಿ ಬಂದ.

ಕಾರ್ತಿಕೇಯ ಕೂಸಾಗಿದ್ದಾಗ ಬಾಣಂತಿ ಹಾಸಿಗೆ ಮೇಲೆ ಮಲಗಿದ್ದನಲ್ಲ ಅದೇ ಥರ ಬಾಣದ ಹಾಸಿಗೆ ಮೇಲೆ ಮಲಗಿತ್ತು ಆ ದೊಡ್ಡ ಜೀವ ಕಣ್ಣು ಮುಚ್ಚಿಕೊಂಡಿದ್ದ.

ಇವನು 'ತಾತಾ' ಅಂತ ಹಿತವಾದ ಇನಿದಾದ ದನೀಲಿ.

'ನಾನು ರಾಧೇ ಮಗ, ಕಣ್ಣಿಗೆ ಬಿದ್ದರೆ ಸಾಕು ದ್ವೇಷ ಕಾರುತ್ತಿದ್ದೆಯಲ್ಲ ಅವನೇನೇ' ಅಂದ.

ಆ ಮಾತು ಕೇಳಿ ಆ ಹಿರಿಜೀವ ಕಣ್ಣು ಮುಚ್ಚಿದ್ದವನು ಮೆಲ್ಲಗೆ ಕಣ್ಣು ತೆರೆದ. ಕಣ್ಣಳತೇಲಿ ಸುತ್ತಲೂ ನೋಡಿ ಕಾವಲುಗಾರರನ್ನೂ ದೂರ ಕಳುಹಿಸಿ ಅಪ್ಪ ಮಗನನ್ನು ತಬ್ಬೋ ಹಾಗೆ ಅವನನ್ನ ಒಂದು ಕೈಲೇ ತಬ್ಬಿಕೊಂಡ ಗಂಗೆಯ ಮಗ.

'ಬಾರಣ್ಣಾ ಬಾ, ಬಾ. ನೀನು ನನ್ನ ಜತೆ ಸದಾ ಹುರುಡು ಕಟ್ಟತಿದ್ದೆ.

ಇವತ್ತಾದರೂ ಬಂದೆಯಲ್ಲ, ನಿನ್ನ ಮೇಲೆ ನನಗೆ ದ್ವೇಷನೇ ನನ್ನಪ್ಪನೆ ನಿಜ ಹೇಳಿಬಿಡತೀನಿ. ನಿನ್ನ ಬೆಳಕು ಮಂಕು ಮಾಡಲು ಒರಟಾಗಿ ಮಾತಾಡತಿದ್ದೆ, ನೀನು ಸುಮ್ಮಸುಮ್ಮನೆ ಪಾಂಡವರನ್ನ ದ್ವೇಷಿಸುತಿದೀಯ ಅಂತ. ಈ ದ್ವೇಷಕ್ಕೆ ಮುಕ್ಕಾಲುವಾಸಿ ರಾಜನ ಕುಮ್ಮಕ್ಕಿರಬೇಕು ಅಂದುಕೊಂಡಿದ್ದೆ. ಜತೆಗೆ ಹೊಟ್ಟೆಕಿಚ್ಚು, ದ್ವೇಷ ತುಂಬಿರೋ ನೀಚರ ಜತೇಲಿದೀಯಲ್ಲಾ ಅಂತ. ತೀರಾ ಒಡ್ಡೊಡ್ಡಾಗಿ ಸಭೇಲಿ ಮಾತಾಡಿದೀನಿ.

ನೀನು ರಾಧೇ ಮಗ ಅಲ್ಲ ಕಣಪ್ಪ, ಕುಂತೀ ಮಗ. ನಿಮ್ಮಪ್ಪ ರಥಿಕ ಅಲ್ಲ, ನೀನು ಸೂರ್ಯನಿಗೆ ಹುಟ್ಟಿದೋನು. ನಾರದ ನನಗೆ ಎಲ್ಲಾ ಹೇಳಿದಾನೆ. ಕೃಷ್ಣದ್ವೈಪಾಯನನೂ ಹೇಳಿದ ಮೇಲೆ ಅದೇ ಸತ್ಯ. ಅನುಮಾನಪಡೋ ಹಾಗೇ ಇಲ್ಲ. ಧರ್ಮ ಮುಕ್ಕಾಗಿ ನಿನ್ನ ಹುಟ್ಟು ಆಗಿರೋದು. ಯುದ್ಧದಲ್ಲಿ ನಿನ್ನೆದುರು ನಿಲ್ಲೋರು ಈ ಭೂಮಿ ಮೇಲೇ ಇಲ್ಲ. ಲೋಕ ತಿಳಿದವರಲ್ಲಿ, ಶೌರ್ಯದಲ್ಲಿ, ದಾನದಲ್ಲಿ ನೀನು ಎಲ್ಲರಿಗಿಂತ ಮೇಲಿದೀಯಾ ನನಗೆ ಗೊತ್ತು. ಗಂಡಿಗೇ ಗಂಡು ನೀನು. ಆದರೆ ಮನೆತನ ಮುರಿದು ಹೋಗತ್ತಲ್ಲ ಅನ್ನುವ ಹೆದರಿಕೆ ನನಗೆ. ಸದಾ ಒರಟು ಮಾತಾಡತಿದ್ದೆ. ಬಾಣ ತೊಡೋದರಲ್ಲಿ, ಕೈಚಳಕದಲ್ಲಿ, ಬಾಣ ತಿರುವೋದರಲ್ಲಿ ಪಾಲ್ಗುಣ, ಕೃಷ್ಣನಂಥ ನಿಪುಣರಿಗೆ ಸಮ ನೀನು ಸತ್ವದಲ್ಲಿ, ತೇಜದಲ್ಲಿ, ಬಲದಲ್ಲಿ, ಸಾತ್ವಿಕತೆಯಲ್ಲೂ ದೇವರಿಗೆ ಹುಟ್ಟಿದವನ ಹಾಗಿದಿಯಾ. ಯುದ್ಧದಲ್ಲಿ ಮನುಷ್ಯರಿಗೆ ಮೀರಿದೋನು. ನನಗೆ ಈಗ ಕೋಪ ಎಲ್ಲಾ

